e) 16.

(f) Total 133 villages including Girijan colonies and ham. lets i.e.,

Kasaba hobli	...	2
Palya hobli	...	6
Tokkana halli hobli	...	59
Hanur hobli	...	20
Kampur hobli	...	46

ಉತ್ತರದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕು. ಕಸಬಾ ಹೋಬಳಿ ೨, ಲೆಕ್ಕನಹಳ್ಳಿ ಹೋಬಳಿ ೫೦, ಹನೂರು ಹೋಬಳಿ ೨೧.

ಶ್ರೀ ಜಿ. ರಾಜು ಗೌಡ.—ಸ್ವಾಮಿ, ಗಿರಿಜನ ಕಾಲೋನಿಗಳು ಹಾಗೂ ಹ್ಯಾಮ್ಲೆಟುಗಳು ಸೇರಿದಂತೆ ೧೩೩ ಅಂತ ಹೇಳಿದ್ದೀರಿ; ೧೫೧ ಬರುತ್ತವೆ. ಈ ತಾಲ್ಲೂಕಿನಲ್ಲಿ ಗಿರಿಜನರು ಅಧಿಕೃತ ಸಂಖ್ಯೆಯಲ್ಲಿದ್ದರೂ ಆ ಕಾಲೋನಿಗಳಿಗೆ ವಿದ್ಯುತ್ ದೀಪದ ವ್ಯವಸ್ಥೆಯನ್ನು ಇನ್ನು ಏತಕ್ಕೆ ತೆಗೆದುಕೊಂಡಿಲ್ಲ ?

† ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ವಿವರಗಳನ್ನು ಕೇಳಿದ್ದರು ವಿವರಗಳನ್ನು ಕೊಟ್ಟಿದ್ದೇನೆ. ಆಗಬೇಕಾದ ಕೆಲಸ ಇನ್ನು ಬಹಳ ಇದೆ. ವಿದ್ಯುಚ್ಛಕ್ತಿ ಮಂಡಳಿಯವರು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಜಿ. ರಾಜುಗೌಡ.—ಗಿರಿಜನರು ಕಾಲೋನಿ ಮಧ್ಯದಲ್ಲಿರತಕ್ಕ ಟಿಬೇಟಿಯನ್ ಪುನರ್‌ವಸತಿ ಕೇಂದ್ರಕ್ಕೆ ವಿದ್ಯುತ್ ಸರಬರಾಜು ಮಾಡಿ, ಅರ್ಧ ಕಿಲೋಮಿಟರ್ ದೂರವೂ ಇಲ್ಲದ ಗಿರಿಜನರ ಕಾಲೋನಿಗೆ ವಿದ್ಯುತ್ ಸರಬರಾಜು ಮಾಡದೇ ಇರುವುದಕ್ಕೆ ಕಾರಣ ಏನು?

ಶ್ರೀ ಕೆ. ಹೆಚ್. ಶ್ರೀನಿವಾಸ್,—ಮಾನ್ಯ ಅಧ್ಯಕ್ಷರೇ, ಇಂಥ ಸಂದರ್ಭಗಳು ಬೇಕಾದಷ್ಟು ಬರುತ್ತವೆ. ಅರ್ಧ ಕಿಲೋಮಿಟರ್ ದೂರದಲ್ಲಿದೆ ಎನ್ನುವ ಕಾರಣ ಸೂಕ್ತ ಆಲ್ಲ. ಸೂಕ್ತವಾದ ಕಾರ್ಯ ಕ್ರಮದಲ್ಲಿ ಆಳವಡಿಸಿಕೊಂಡು ಮಾಡುತ್ತಾರೆ.

ಶ್ರೀ ಜಿ. ರಾಜುಗೌಡ.—ಗಿರಿಜನ ಹರಿಜನ ಕಾಲೋನಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ವಿದ್ದು, ವಿದ್ಯುಚ್ಛಕ್ತಿ ಸರಬರಾಜು ಇಲ್ಲದೇ ಕುಡಿಯುವ ನೀರನ್ನು ಒದಗಿಸುವ ಕಾರ್ಯ ಸ್ಥಗಿತಗೊಂಡಿದೆ. ಕುಡಿಯುವ ನೀರಿನ ದೃಷ್ಟಿಯಿಂದಲಾದರೂ ವಿದ್ಯುತ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕಾಲೋನಿಗಳಿಗೆ ವಿಶೇಷವಾದ ಕಾರ್ಯಕ್ರಮ ಇದೆ. ಕಾಲೋನಿಗಳಿಗೆ ಆದ್ಯತೆ ಆಧಾರದಮೇಲೆಯೇ ವಿದ್ಯುತ್ ಒದಗಿಸಲಾಗುತ್ತಿದೆ. ಕುಡಿಯುವ ನೀರಿನ ಪ್ರಶ್ನೆ ಇರುವುದರಿಂದ ಆದ್ಯತೆ ಆಧಾರದಮೇಲೆ ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

12-30 P. M.

Davanagere as District Headquarters

922 SRI PAMPAPATHI (Davanagere).—Will the Minister for Revenue be pleased to state:—

(*a*) whether hardship encountered by the citizens of Davanagere City, which is coming up Industrially, Educationally and as a trading centre, in reaching Chitradurga the district Headquarters has come to the notice of Government;

(*b*) whether the people of Davanagere have urged the Government to make Davanagere a District Headquarters:

(*c*) the steps taken by the Government in this regard;

(*d*) the period required for converting Davanagere as a District Headquarters early ?

SRI B. BASAVALINGAPPA (Minister for Revenue).—

(*a*) No.
(*b*) No.

(c) & (d) These questions do not arise in view of replies given above.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ನಗರವು ಔದ್ಯಮಿಕವಾಗಿ, ಶೈಕಣಿಕವಾಗಿ ಹಾಗೂ ವ್ಯಾಪಾರೀ ಕೇಂದ್ರವಾಗಿ ಬೆಳೆಯುತ್ತಿದ್ದು ನಾಗರೀಕರು ಹಲವಾರು ಕಛೇರಿ ಕೆಲಸಗಳಿಗಾಗಿ ಜಿಲ್ಲಾ ಕೇಂದ್ರವಾದ ಚಿತ್ರದುರ್ಗಕ್ಕೆ ಹೋಗುವುದಕ್ಕೆ ದಾವಣಗೆರೆಯ ನಾಗರೀಕರಿಗೆ ಬಹಳ ಅನಾನುಕಾಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದೇ ನನ್ನ ಪ್ರಶ್ನೆ. ಇವೊತ್ತು ೨ ಲಕ್ಷ ಜನಸಂಖ್ಯೆ ಇರತಕ್ಕ ಪ್ರದೇಶದಿಂದ ಚಿತ್ರದುರ್ಗಕ್ಕೆ ಜಿಲ್ಲಾ ಕೇಂದ್ರ ಕಛೇರಿಗಳಿಗೆ ಹೋಗಲಿಕ್ಕೆ ಜನರಿಗೆ ಅನಾನುಕೂಲವಾಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ೧೯೭೬ನೇ ಇಸವಿಯಲ್ಲಿ ನಗರಸಭೆ ಒಂದು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಕಳುಹಿಸಿದ್ದೇವೆ. ೧೯೭೬ನೇ ಇಸವಿಯಲ್ಲಿ ಏಕ ಸದಸ್ಯ ಆಯೋಗ ಬಂದು ದಾವಣಗೆರೆ, ಹರಿಹರ, ಹೆಡಗಲಿ, ಇನ್ನೂ ಅನೇಕ ಭಾಗದಿಂದ ಸಾವಿರಾರು ಜನರು ಬಂದು ಏಕ ಸದಸ್ಯ ಆಯೋಗದಿಂದ ಮುಂದೆ ತಮ್ಮ ತೊಂದರೆಗಳನ್ನು ನಿವೇದಿಸಿಕೊಂಡಿದ್ದಾರೆ. ತಾವು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಆದುದರಿಂದ ಈ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ ?

† ಬಿ. ಬಸವಲಿಂಗಪ್ಪ.—ಈಗ ತೊಂದರೆ ಅನುಭವಿಸಿರತಕ್ಕವರು ಕಂಪ್ಲೇಂಟ್ ಮಾಡಿದ್ದಾರೆ, ದೂರು ಕೊಟ್ಟಿಲ್ಲ. ಇವೊತ್ತು ದಾವಣಗೆರೆ ಮಾಡಬೇಕೆ, ಚಿತ್ರದುರ್ಗ ಮಾಡಬೇಕೆ, ಇದು ಪುನರ್ ಸಂಘಟನೆ ಏನಿದೆ ಈ ವಿಚಾರ ಸರ್ಕಾರದಲ್ಲಿದೆ. ಈಗ ವಾಸುದೇವರಾವ್ ಕಮಿಷನ್ ವರದಿ ನಮಗೆ ಕಳುಹಿಸಿದ್ದಾರೆ. ಅದರ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾದನಂತರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಪಂಪಾಪತಿ.—ಸ್ವಾಮಿ, ತಾವು ಹರಿಹರದವರು, ತಮಗೆ ಗೊತ್ತಿದೆ, ಆದುದರಿಂದ ದಾವಣಗೆರೆ ಜಿಲ್ಲಾ ಕೇಂದ್ರ ಮಾಡಲಿಕ್ಕೆ ತಾವು ಸಂಪೂರ್ಣ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ನಾನು ಹರಿಹರದವನಾದರೆ ಮಾಡಲಿಕ್ಕೆ ಆಗುತ್ತದೆಯೇ ? ಮೊದಲು ತಮ್ಮ ಅಭಿಪ್ರಾಯ ತೆಗೆದುಕೊಳ್ಳುತ್ತೇನೆ. ಈ ವರದಿ ತಮ್ಮ ಮುಂದೆ ಇದೆ, ನಾನ್ ಆಫಿಷಿಯಲ್ ಬಿಸಿನಸ್ ಇದ್ದ ದಿವಸ ಇದನ್ನು ಅಸೆಂಬ್ಲಿಯಲ್ಲಿ ಇಟ್ಟುಕೊಂಡು, ತಮ್ಮ ಅಭಿಪ್ರಾಯ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ. ದಾವಣಗೆರೆ ಮಾಡಬೇಕೆ, ಚಿತ್ರದುರ್ಗ ಮಾಡಬೇಕೆ, ಯಾವುದು ಹೆಡ್‌ಕ್ವಾರ್ಟರ್ಸ್‌ಗೆ ಸೇರಿಸಬೇಕೆಂದು ಪರಿಶೀಲನೆ ಮಾಡೋಣ.

ಶ್ರೀ ಜಿ. ಬಿ. ಶಂಕರರಾವ್.—ಸ್ವಾಮಿ, ದಾವಣಗೆರೆ ಭಾಗದಲ್ಲಿ ೨ ಲಕ್ಷ ಜನಸಂಖ್ಯೆ ಇದೆ, ಅಲ್ಲಿಂದ ಚಿತ್ರದುರ್ಗ ೪೦ ಮೈಲಿ ದೂರ ಆಗುತ್ತದೆ. ಇವೊತ್ತು ದಾವಣಗೆರೆ ಜಿಲ್ಲಾ ಕೇಂದ್ರ ಮಾಡಿ ಆಥವಾ ಬಿಡಿ. ಅದು ಬೇರೆ ಪ್ರಶ್ನೆ. ಇವೊತ್ತು ದಾವಣಗೆರೆ ಜನತೆಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರದಿಂದ ಉತ್ತರ ಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಜನರಿಗೆ ತೊಂದರೆಯಾಗಿರುವ ಬಗ್ಗೆ ನಂತರ ಯೋಚನೆ ಮಾಡೋಣ. ನಾನು ಹರಿಹರದವನಾವ ಮೇಲೆ ದಾವಣಗೆರೆ ವ್ಯವಹಾರ ಗೊತ್ತಿಲ್ಲವೇ ? ನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ.

MR. SPEAKER.—Question Nos. 613 and 1117 are held over.